ತಾರೀಖು 17ನೆ ಸೆಪ್ಟಂಬರ್ 1903.

1900ನೆ ಇಸವಿ XIನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟು ರೆಗ್ಯುಲೇಷನ್ 17ನೆ ಸೆಕ್‌ಷನಿನ ವಿಧಿಗಳನುಸರಿಸಿ ಈ
ಹಾರಿಗೆ ಜಂಟಿಸಿ ಇರುವ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಚಕ್ಕುಬಂದಿಯುಳ್ಳ ಪ್ರದೇಶವು 1903ನೆ ಸೆಪ್ಟಂಬರ್ ಗುರ್ರು ಲಾಗಾ
ಈ ಇಸ್ತಿಹಾರಿನ ಅಡೀಲಿ ವಿವರಿಸಿ ಇರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು ಸ್ಟೇಟ್ ಫಾರೆಸ್ಟು ಆಗಿರುತ್ತದೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಚಕ್ಕುಬಂದಿ.
ಚಿತ್ರದುರ್ಗ.	ಹೊಳಲಕೆರೆ ತಾಲ್ಲೂಕು.	$3\frac{1}{3}$ ಚದರ ಮೈಲಿ.	ಗರ್ಗಾ ಕಾವಲ್.	ಉತ್ತರಕ್ಕೆ.—ಗರ್ಗಾ ಗ್ರಾಮದ ಸರ್ವೆ ನಂ. 1ರ ನೈರುತ್ಯ ಮೂಲೆಯಿಂದ ಹೊರಟು ಲೈನು ಸದರೀ ಗ್ರಾಮದ ಸರ್ವೆ ನಂ. 1, 2, 12 ವ 13 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ತರುವಾಯ ಗರ್ಗದ ಸರ್ವೆ ನಂ. 16, ಗಿಲ್ಕೇನಹಳ್ಳಿಯ ಸರ್ವೆ ನಂ. 44, 43 ವ 42 ಮತ್ತು ಹಳೇಹಳ್ಳಿಯ ಸರ್ವೆ ನಂ. 41 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಅದರ ಕೇವಲ ದಕ್ಷಿಣ ಮೂಲೆಗೆ ಹೋಗುತ್ತದೆ. ಆಮೇಲೆ ಹಳೇಹಳ್ಳಿಯ ಸರ್ವೆ ನಂ. 59ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಹೊಳಲಕೆರೆಯ ಸರ್ವೆ ನಂ. 276ರ ಈಶಾನ್ಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ದಕ್ಷಿಣಕ್ಕೆ.—ತರುವಾಯ ಹೊಳಲಕೆರೆಯ ಸರ್ವೆ ನಂ. 276ರ ಉತ್ತರ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 274ರ ಆಗ್ನೇಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಪಶ್ಚಿಮಕ್ಕೆ.—ಆಮೇಲೆ ಹೊಳಲಕೆರೆಯ ಸರ್ವೆ ನಂ. 274 ವ 273, ಚೀರನಹಳ್ಳಿಯ ಸರ್ವೆ ನಂ. 27, ಚಟ್ನಹಳ್ಳಿಯ ಸರ್ವೆ ನಂ. 12 ಮತ್ತು ಹಾರೇನಹಳ್ಳಿಯ ಸರ್ವೆ ನಂ. 30 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

ಷರಾ. ಎ.—ಹಾದಿಯ ಇದರಡೀ ಕಂಡ ಹಕ್ಕುಗಳು ಬ್ಲಾಕಿನಲ್ಲಿ ಹಂಗಾಮಿಯಾಗಿ ಕೊಡಲ್ಪಟ್ಟಿರುತ್ತವೆ:—

(1) ಹೊಳಲಕೆರೆ ಮತ್ತು ಹಳೇಹಳ್ಳಿ ಗ್ರಾಮಗಳಿಂದ ಗರ್ಗಾ ಕಾವಲಿನ ಸರ್ವೆ ನಂ. 1ರ ಆಗ್ನೇಯ ಮೂಲೆ[illegible]ದ ಆಂಜನೇಯ ದೇವಸ್ಥಾನದವರಿವಿಗೆ ಸುಮಾರು 1 ಫರ್ಲಾಂಗಿನ ಉದ್ದವಾದ ಮತ್ತು 8 ಅಡಿಗಳ ಅಗಲವುಳ್ಳ ಕಾಲಹಾದಿಯು [illegible]ಗಳಿಗೂ ವ ದನಗಳಿಗೂ ಬಿಟ್ಟಿರುತ್ತದೆ. ಈ ಹಾದಿಯು ಸ್ಟೇಟ್ ಫಾರೆಸ್ಟನ್ನು ಹೊಳಲಕೆರೆಯ ಸರ್ವೆ ನಂ. 276ರ ಈಶಾನ್ಯ ಮೂಲೆಯ ಬಾಂದಿನಿಂದ ಸುಮಾರು 100 ಗಜಗಳ ಫಾಸಲೆಯಲ್ಲಿ ಪ್ರವೇಶಿಸಿ ಹೊಳಲಕೆರೆಯ ಸರ್ವೆ ನಂ. 276ರ ಈಶಾನ್ಯ ಮೂಲೆಯಿಂದ ಉತ್ತರಕ್ಕೆ ಸುಮಾರು 50 ಗಜಗಳ ಫಾಸಲೆಯಲ್ಲಿ ಹಳೇಹಳ್ಳಿಯ ಸರ್ವೆ ನಂ. 59ರ ಪಶ್ಚಿಮ ಪಾರ್ಶ್ವದಲ್ಲಿ ಸ್ಟೇಟ್ ಫಾರೆಸ್ಟನ್ನು ಬಿಡುತ್ತದೆ.

(2) ಗಿಲ್ಕೇನಹಳ್ಳಿಯಿಂದ ಅರಸೀಘಟ್ಟದ ವರಿವಿಗೆ 12 ಅಡಿಗಳ ಅಗಲವುಳ್ಳ ಬಂಡಿ ಜಾಡು ಜನಗಳಿಗೂ, ದನಗಳಿಗೂ ಮತ್ತು ಬಂಡಿಗಳಿಗೂ ಬಿಟ್ಟಿರುತ್ತೆ. ಈ ಬಂಡಿ ಜಾಡು ಗಿಲ್ಕೇನಹಳ್ಳಿಯ ಸರ್ವೆ ನಂ. 44ರ ಪಶ್ಚಿಮ ಪಾರ್ಶ್ವದಲ್ಲಿ ಅದರ ಈಶಾನ್ಯ ಮೂಲೆಯಿಂದ ಸುಮಾರು $3\frac{1}{2}$ ಫರ್ಲಾಂಗುಗಳ ಫಾಸಲೆಯಲ್ಲಿ ಫಾರೆಸ್ಟನ್ನು ಪ್ರವೇಶಿಸಿ ವಾಯುವ್ಯ ದಿಕ್ಕಾಗಿ ಸುಮಾರು ಅರ್ಧಮೈಲಿ ದೂರ ಹೋಗಿ ಗರ್ಗಾ ಗ್ರಾಮದ ಸರ್ವೆ ನಂ. 12ರ ನೈರುತ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(3) ಗಿಲ್ಕೇನಹಳ್ಳಿಯಿಂದ ಹಾರೇನಹಳ್ಳಿ ವರಿವಿಗೆ 12 ಅಡಿ ಅಗಲವುಳ್ಳ ಬಂಡಿ ಜಾಡು ಜನಗಳಿಗೂ, ದನಗಳಿಗೂ ಮತ್ತು ಬಂಡಿಗಳಿಗೂ ಬಿಟ್ಟಿರುತ್ತೆ. ಈ ಬಂಡಿ ಜಾಡು ಸ್ಟೇಟ್ ಫಾರೆಸ್ಟನ್ನು ಗಿಲ್ಕೇನಹಳ್ಳಿಯ ಸರ್ವೆ ನಂ. 43ರ ಪಶ್ಚಿಮ ಪಾರ್ಶ್ವದಲ್ಲಿ ಅದರ ವಾಯುವ್ಯ ಮೂಲೆಯಿಂದ ಸುಮಾರು 150 ಗಜಗಳ ಫಾಸಲೆಯಲ್ಲಿ ಪ್ರವೇಶಿಸಿ ಪಶ್ಚಿಮ ದಿಕ್ಕಾಗಿಯೂ ವಾಯುವ್ಯ ದಿಕ್ಕಾಗಿಯೂ ಸುಮಾರು 1 ಮೈಲಿ ಹೋಗಿ ಹಾರೇನಹಳ್ಳಿಯ ಸರ್ವೆ ನಂ. 30ರ ಪೂರ್ವ ಪಾರ್ಶ್ವದಲ್ಲಿ ಅದರ ಆಗ್ನೇಯ ಮೂಲೆಯಿಂದ ಸುಮಾರು 200 ಗಜಗಳ ಫಾಸಲೆಯಲ್ಲಿ ಸ್ಟೇಟ್ ಫಾರೆಸ್ಟನ್ನು ಬಿಡುತ್ತದೆ.

(4) ಗಿಲ್ಕೇನಹಳ್ಳಿಯಿಂದ ಚೀರನಹಳ್ಳಿ ವರಿವಿಗೆ 6 ಅಡಿಗಳ ಅಗಲವುಳ್ಳ ಕಾಲಹಾದಿಯು ಜನಗಳಿಗೂ ಮತ್ತು ದನಗಳಿಗೂ ಬಿಟ್ಟಿರುತ್ತೆ. ಈ ಹಾದಿಯು ಫಾರೆಸ್ಟನ್ನು ಗಿಲ್ಕೇನಹಳ್ಳಿಯ ಸರ್ವೆ ನಂ. 42ರ ಪಶ್ಚಿಮ ಪಾರ್ಶ್ವದಲ್ಲಿ ಅದರ ವಾಯುವ್ಯ ಮೂಲೆಯ ಬಾಂದಿನಿಂದ ಸುಮಾರು 100 ಗಜಗಳ ಫಾಸಲೆಯಲ್ಲಿ ಪ್ರವೇಶಿಸಿ ಪಶ್ಚಿಮ ದಿಕ್ಕಾಗಿ ಸುಮಾರು 1 ಮೈಲಿ ದೂರ ಹೋಗಿ ಚೀರನಹಳ್ಳಿಯ ಸರ್ವೆ ನಂ. 27ರ ಆಗ್ನೇಯ ಮೂಲೆಯಿಂದ ಸುಮಾರು 2 ಫರ್ಲಾಂಗುಗಳ ಫಾಸಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

ಬಿ. ಇದರಡೀ ಕಂಡ ಹಕ್ಕುಗಳು ಬ್ಲಾಕಿನಲ್ಲಿ ಕೊಡಲ್ಪಟ್ಟಿರುತ್ತವೆ:—

ಗರ್ಗಾ ಕಾವಲಿನ ಸರ್ವೆ ನಂ. 1ರ ಆಗ್ನೇಯ ಮೂಲೆಯಲ್ಲಿರುವ ಆಂಜನೇಯ ದೇವಸ್ಥಾನದ ಸಮೀಪದಲ್ಲಿ $1\frac{1}{2}$ ಎಕರೆ ವುಳ್ಳ ದಂಡು ಇಳಿಯುವ ಭೂಮಿಯು ಬಿಡಲ್ಪಟ್ಟು ಆವರ್ಣವಾಗಿ ಎಣಿಸಲ್ಪಟ್ಟಿರುತ್ತದೆ.

ಹೆಚ್. ರಾಮಾನುಜೈಯ್ಯಂಗಾರ್,
ಡೆಪ್ಯುಟಿ ಕಮೀಷನರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 10ನೆ ಅಕ್ಟೋಬರ್ 1903.

1. ಕಂದಾಯದ ಬಾಕೀದಾರರಾದ ಖಾಯಂಗುತ್ತಾ ಪಾರೇ ಹೊಸಹಳ್ಳಿ ಗ್ರಾಮದ ರಾಮಯ್ಯ ವಗೈರೆ ಫವತಿ ಹಾಲಿ ಕ್ರಯದಾರ ನಾರಾಯಣಶಾಸ್ತ್ರಿ ವಗೈರೇರಿಂದ ಬರಬೇಕಾದ ಜಮಿರ್ಹಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಛೇರಿಯಲ್ಲಿ 1903ನೆ ಇಸವಿ ಡಿಶಂಬರು ಮಾಹೆ 4ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 429—11—4 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದ್ಯಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜ್ ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕ್ಕುಮಿಗೆ ಬದ್ಧವಾಗಿರತಕ್ಕದ್ದು :—

				ಸ್ವತ್ತಿನ ತಪ್ಸೀಲ್.												
				ಕಟ್ಟಡಗಳು.		ಜಮೀನು.										
ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಅಕಾರ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.			
					ರೂ. ಆ. ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.	
ಕೋಲಾರ	ಹುತ್ತೂರು	ಖಾಯಂಗುತ್ತಾ ಪಾರೇ ಹೊಸಹಳ್ಳಿ	ನಾರಾಯಣಶಾಸ್ತ್ರಿ ವಗೈರೇರು	...	...	ಪರಂಪೋಕು	..	340	26	...			428	11	4	ಶುಭಕೃತು
						ಖುಷ್ಕಿ	..	230	6	349	4	0	1	0	0	ಪ್ರೋಸೆಸ ಫೀ
						ತರಿ	..	90	20	363	6	0	—			
						ಬಾಗಾಯತು	...	6	24	27	0	0	429	11	4	
								667	36	739	10	0				

ಚಕ್ಕು ಬಂದಿ.

ಪೂರ್ವಕ್ಕೆ—ಇರಗಸಂದ್ರ.
ಪಶ್ಚಿಮಕ್ಕೆ—ಮಾಚೇನಹಳ್ಳಿ.
ಉತ್ತರಕ್ಕೆ—ಮುತ್ತಿ ಕುಂಟೆ.
ದಕ್ಷಿಣಕ್ಕೆ—ವರದೇನಹಳ್ಳಿ.
(ಈ ಮಧ್ಯೆ ಇರುವ ಪೂರಾ ಗ್ರಾಮ)

---

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 10ನೆ ಅಕ್ಟೋಬರ್ 1903.

1. ಕಂದಾಯದ ಬಾಕೀದಾರರಾದ ಜೋಡಿ ಮುತ್ತಕದಹಳ್ಳಿ ಗ್ರಾಮದ ನರಶಿಂಗರಾಯರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕು ಕಛೇರಿಯಲ್ಲಿ ಸರ್ 1903ನೆ ಇಸವಿ ಡಿಸೆಂಬರ್ ಮಾಹೆ 4ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 136—2—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೆ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈರ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್.						ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.			
				ಕಟ್ಟಡಗಳು.		ಜಮೀನು.							
				ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.				
					ರೂ. ಆ. ಪೈ.			ಖ. ಕೋ. ಪ.	ರೂ. ಆ. ಪೈ.	ರೂ.	ಆ.	ಪೈ.	
ಮಾಲೂರು	ನರಸಾಪುರ	ಜೋಡಿ ಮುತ್ತಕದಹಳ್ಳಿ	ನರಶಿಂಗರಾವು	...	...	ಖುಷ್ಕಿ		6 18 5	178 0 0	135	2	0	ಬಾಕಿ
						ತರಿ		9 6 3		1	0	0	ಪ್ರೋಸೆಸ್ ಫೀ
						ಪರಂಪೋಕು		2 12 5		136	2	0	
								18 16 13					
						ಚೆಕ್ಕುಬಂದಿ. ಪೂರ್ವಕ್ಕೆ—ಶಿವಾರಪಟ್ಣ. ಪಶ್ಚಿಮಕ್ಕೆ—ಶಿವಾರಪಟ್ಣದ ಜಮೀನ್. ಉತ್ತರಕ್ಕೆ—ಶೀತಪ್ಪನಹಳ್ಳಿ. ದಕ್ಷಿಣಕ್ಕೆ—ಶಿವಾರಪಟ್ಣದ ಜಮೀನ್. (ಈ ಮಧ್ಯೆ ಇರುವ ಪೂರಾಗ್ರಾಮ.)							

---

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಫ್. ಸಿ. ಕಾರ್, ಡೆಪ್ಯುಟಿ ಕಮಿಷನರ್.